OS 69/2019 PW-1

**ದಿನಾಂಕಃ 14-01-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ವಕೀಲರಿಂದಃ</u>**

1. ನಾನು ಮತ್ತು ನನ್ನ ಯಜಮಾನರು ಸರ್ಕಾರಿ ಉದ್ಯೋಗದಲ್ಲಿದ್ದು, ನಿವೃತ್ತರಾಗಿರುತ್ತ್ತೇವೆ ಎಂದರೆ ಸರಿ. ನನ್ನ ಮದುವೆಗೂ ಮುಂಚೆ ನನ್ನ ಗಂಡನ ಮನೆಯಲ್ಲಿ ಏನೇನು ವ್ಯವಹಾರ ಆಗಿರುತ್ತದೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಮುಂದುವರೆದು ಆಮೇಲೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

2. ದಾವಾ ಜಮೀನಿನಲ್ಲಿ ಯಾವುದು ಖರೀದಿಸಿದ ಜಮೀನು, ಯಾವುದು ಪಿತ್ರಾರ್ಜಿತ ಜಮೀನು ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿ 1 ರಿಂದ 4 ರವರ ತಂದೆ ಮಹಾಲಿಂಗಪ್ಪ ಇವರು ಬುಕ್ಕಾಪಟ್ಟಣ ಹೋಬಳಿ , ನಿಂಬೇಮರದ ಹಳ್ಳಿ ಗ್ರಾಮದಲ್ಲಿ ಮದುವೆಯಾಗಿದ್ದರು ಎಂದರೆ ಸರಿ. ಸದರಿ ನಿಂಬೇಮರದಹಳ್ಳಿಯಿಂದ ಬಂದಕುಂಟೆ ಗ್ರಾಮಕ್ಕೆ ಸುಮಾರು 25 ಕಿ.ಮೀ ದೂರವಿದೆ.

3. ದಾವಾ ಐಟಂ ನಂ.29 ನಿಂಬೇಮರದ ಹಳ್ಳಿ ಗ್ರಾಮದ ಜಮೀನು ಆಗಿದ್ದು , ಅದರ ಸರ್ವೇ ನಂ. ಗೊತ್ತಿಲ್ಲ, ಅದರ ವಿಸ್ತೀರ್ಣ 9 ಎಕರೆ ಇರಬಹುದು. ಸದರಿ ಜಮೀನನ್ನು ನನ್ನ ಯಜಮಾನರ ಅಣ್ಣ ಮಹಾಲಿಂಗಪ್ಪನವರು ಅವರ ನೆಂಟರ ಸಹಾಯದಿಂದ ದರಕಾಸ್ತು ಮೇರೆಗೆ ಅನುಭವಿಸುತ್ತಿದ್ದರು ಎಂದರೆ ಇರಬಹುದು. ಸದರಿ ಜಮೀನನ್ನು 1959 ನೇ ಇಸವಿಯಲ್ಲಿ ಮಹಾಲಿಂಗಪ್ಪನವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಹಣದಿಂದ ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮಂಜೂರಾದ ದಿನದಿಂದಲೂ ಮಹಾಲಿಂಗಪ್ಪನವರ ಪ್ರತ್ಯೇಕವಾಗಿ ಸದರಿ ಜಮೀನನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ 9 ಎಕರೆ ಜಮಿನಿನ ಪೈಕಿ 5 ಎಕರೆ ಜಮೀನನ್ನು ದಿಃ 08-11-2001 ರಂದು ಮಹಾಲಿಂಗಪ್ಪನವರು 12 ನೇ ಪ್ರತಿವಾದಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದ ಹಾಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆಗಿನಿಂದಲೂ 12 ನೇ ಪ್ರತಿವಾದಿಗೆ

ಸದರಿ ಜಮೀನಿನ ಖಾತೆ , ಪಹಣಿ ಮಾಡಿಸಿಕೊಂಡು ಸ್ವಾಧೀನಾನುಭದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ಈ ದಾವೆ ಹಾಕಲು ವಕೀಲರು ಮಾಹಿತಿಯನ್ನು ನನ್ನ ಮಗ ನೀಡಿರುತ್ತಾನೆ. 12 ನೇ ಪ್ರತಿವಾದಿಯು ಐಟಂ ನಂ.29 ಜಮೀನನ್ನು ಕೆನರಾ ಬ್ಯಾಂಕ್ ಗೆ ಅಡಮಾನ ಮಾಡಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. ನಾನು ಈಗ ತುಮಕೂರಿನಲ್ಲಿ ವಾಸವಾಗಿದ್ದೇನೆ. ನನ್ನ ಜೊತೆ ನನ್ನ ಯಜಮಾನರು ಮತ್ತು ಮಕ್ಕಳು ವಾಸವಾಗಿದ್ದಾರೆ. ನನ್ನ ಯಜಮಾನರು ತಮ್ಮ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ವಾಕರ್ ನಲ್ಲಿ ಓಡಾಡಿಕೊಂಡು ಮಾಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನನ್ನ ಯಜಮಾನರು ಆರೋಗ್ಯವಾಗಿದ್ದು , ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂದು ನನ್ನನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

4. ಮಹಾಲಿಂಗಪ್ಪನವರು 1953 ನೇ ಇಸವಿಯಿಂದಲೂ ಅವರ ಅತ್ತೆ ಕೆಂಚಮ್ಮನವರ ಮನೆಯಲ್ಲಿ ಸಾಕುಮಗನಾಗಿ ಅಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.29 ಮಹಾಲಿಂಗಪ್ಪನವರ ಸ್ವಯಾರ್ಜಿತ ಸ್ವತ್ತಾಗಿದ್ದು , ನಾನು ಉದ್ದೇಶಪೂರ್ವಕವಾಗಿ ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ತುಮಕೂರಿನಲ್ಲಿರುವ ಮನೆ ಮತ್ತು ಸೈಟನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸುಳ್ಳು ದಾವೆ ಹೂಡಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.